Rotary 2024-25

THE MAGIC OF ROTARY

ಮಿಡ್‌ಟೌನ್ ನ್ಯೂಸ್

# Midtown News

In House Bulletin of Rotary Club Shimoga Mid Town

R.I. President : Rtn. Stephanie A. Urchick
Dist. Governor : Rtn. Dev Anand
Asst. Governor : Rtn. Nagaraj S.R.

President : Rtn. Suresh Kumar D.
Secretary : Rtn. Faheem Hussain

Director : Rtn. Badriprasad T.A.
Editor : Rtn. Meera Nadig
Co-Chairmen : Rtn. Anand I.R.
Members : Rtn. G.N.N. Murthy, Rtn. Faheem Hussain

*We meet on 2nd, 3rd and 4th Thursday at Rotary Mid Town Hall, SHIVAMOGGA-577201* rotaryshimogamidtown@gmail.com

Vol. 41 10 - 10 - 2024 ISSUE 12

## Economic and Community Development Month

### ದಿನಾಂಕ 26-9-2024ರ ವಾರದ ಸಭೆಯ ವರದಿ

ದಿನಾಂಕ 26-9-2024ರ ವಾರದ ಸಭೆಯು ಕೌಟುಂಬಿಕ ಸ್ನೇಹ ಮಿಲನದ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಸುರೇಶ್ ಕುಮಾರ್ ಡಿ. ಇವರು ವಹಿಸಿದ್ದರು ಹಾಗೂ ಅವರು ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು, ಆ್ಯನ್ಸ್ ಹಾಗೂ ಆ್ಯನೆಟ್‌ರವರನ್ನು ಸ್ವಾಗತಿಸಿದರು. ವೇದಿಕೆಯ ಮೇಲೆ ಅಧ್ಯಕ್ಷರೊಂದಿಗೆ ಕಾರ್ಯದರ್ಶಿ ರೊ. ಫಹಿಂ ಹುಸೇನ್, ನಿಕಟ ಪೂರ್ವ ಅಸಿಸ್ಟೆಂಟ್ ಗವರ್ನರ್‌ರಾದ ರೊ. ರಾಜೇಂದ್ರ ಪ್ರಸಾದ್ ಎಂ.ಆರ್., ಆನ್ಸ್ ಕ್ಲಬ್ಬಿನ ಉಪಾಧ್ಯಕ್ಷರಾದ ರೊ. ವೀಣಾ ಸುರೇಶ್ ಹಾಗೂ ಕಾರ್ಯದರ್ಶಿಣಿ ರೊ. ಉಮಾ ಅಮರ್‌ರವರು ಉಪಸ್ಥಿತರಿದ್ದರು.

ಇಂದಿನ ಮುಖ್ಯ ಕಾರ್ಯಕ್ರಮದಲ್ಲಿ ಒಂದಾಗಿದ್ದ ಹೊಸ ಸದಸ್ಯರ ಸೇರ್ಪಡೆಯಲ್ಲಿ ನೂತನವಾಗಿ ಶಿವಮೊಗ್ಗ ನಗರದ ಹಣ್ಣಿನ ಸಗಟು ವ್ಯಾಪಾರರಾದ ಡಿ. ಮಲ್ಲಪ್ಪ ಸನ್ಸ್‌ನ ಪಾಲುದಾರರಾದ ಶ್ರೀ ಮೋಹನ್ ಕುಮಾರ್ ಎಂ. ಹೊಂಬಾಳೆ ಇವರನ್ನು ಕ್ಲಬ್ಬಿಗೆ ಹೊಸದಾಗಿ




ಸೇರ್ಪಡೆಗೊಳಿಸಲಾಯಿತು. ರೊ. ರಾಜೇಂದ್ರ ಪ್ರಸಾದ್‌ರವರು ಇವರಿಗೆ ಪಿನ್ ತೊಡಿಸುವುದರ ಮೂಲಕ ಅಧಿಕೃತವಾಗಿ ಕ್ಲಬ್ಬಿಗೆ ಸೇರಿಸಿದರು. ಸೇರ್ಪಡೆಗೊಂಡ ಶ್ರೀಯುತರು ತಮ್ಮ ಕಾರ್ಯವೈಖರಿಯ ಬಗ್ಗೆ ಸವಿಸ್ತಾರವಾಗಿ ಸಭೆಯಲ್ಲಿ




ಮಾತನಾಡಿದರು.

## ವಾರದ ಸಭೆ

ದಿನಾಂಕ : **10-10-2024, ಗುರುವಾರ**

ಸಮಯ : **ಸಂಜೆ 7.30ಕ್ಕೆ**

ವಿಷಯ : **ಕ್ಲಬ್ ಅಫೇರ್ಸ್**

ಶಿಕ್ಷಕರ ದಿನಾಚರಣೆಯ ಅಂಗವಾಗಿ ಕ್ಲಬ್ಬಿನ ಶಿಕ್ಷಕ ವೃತಿಯಲ್ಲಿ ತೊಡಗಿಸಿಕೊಂಡಿರುವ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿ ಗೌರವಿಸಲಾಯಿತು.

ಹಾಗೆಯೇ ಇಂಜಿನಯರ್ಸ್ ಡೇ ಇದರ ಅಂಗವಾಗಿ ಕ್ಲಬ್ಬಿನಲ್ಲಿರುವ



ಇಂಜಿನಿಯರ್‌ಗಳನ್ನು ವೇದಿಕೆಗೆ ಆಹ್ವಾನಿಸಿ ಪುರಸ್ಕರಿಸಲಾಯಿತು.

ಹಾಗೆಯೇ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟು ಹಬ್ಬ, ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ಸದಸ್ಯರನ್ನು ಮತ್ತು ಆನ್ಸ್ ಸದಸ್ಯರನ್ನು ಹಾಗೂ ಇಂದಿನ ಭೋಜನ ಕೂಟದ ಆತಿಥ್ಯವನ್ನು ವಹಿಸಿದ ಸದಸ್ಯರನ್ನು ಸಹ ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು.

ನಂತರ ಕ್ಲಬ್ಬಿನ ಕರಾವೊಕೆ ಸದಸ್ಯರುಗಳಿಂದ ನಡೆದ ಮನೋರಂಜನಾ ಕಾರ್ಯಕ್ರಮದಲ್ಲಿ ರೊ. ಉಜ್ವಲಾ ರವಿ, ರೊ. ಡಾ|| ಅಕ್ಷತಾ ಓಕಾಡೆ, ರೊ. ಹೆಚ್.ಎನ್.ಎಸ್. ರಾವ್, ರೊ. ಶ್ವೇತಾ ಆಚಾರ್ಯ, ರೊ. ಆನಂದ್ ಐ.ಆರ್. ಇವರುಗಳು ಜಾನಪದ ಮತ್ತು ಚಿತ್ರಗೀತೆಗಳನ್ನು ಹಾಡುವುದರ ಮೂಲಕ ಸಭಿಕರನ್ನು ಮನರಂಜಿಸಿದರು.

ಕೊನೆಯಲ್ಲಿ ಸಂಪ್ರದಾಯದಂತೆ ಕಾರ್ಯದರ್ಶಿಗಳಾದ ರೊ. ಫಹೀಂ ಹುಸೇನ್ ಇವರು ವಂದನಾರ್ಪಣೆಯನ್ನು ನೆರವೇರಿಸಿ, ಎಲ್ಲರನ್ನು ಇಂದಿನ ಭೋಜನಕ್ಕೆ ಆಹ್ವಾನವನ್ನು ನೀಡಿದರು.

### 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?









ಎಸ್.ಡಿ.ಎಂ.ಸಿ. ಸದಸ್ಯರು ಮತ್ತು ಇಂಟರ್ಯಾಕ್ಟ್ ಕ್ಲಬ್ ಆಶ್ರಯದಲ್ಲಿ ಅಕ್ಟೋಬರ್ 2ರ ಗಾಂಧಿ ಜಯಂತಿ ಪ್ರಯುಕ್ತ ಶಾಲಾ ಆವರಣ ಮತ್ತು ಅದರ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುವುದರ ಮೂಲಕ ಶ್ರಮಾದಾನ ಮಾಡಲಾಯಿತು.



ದಿನಾಂಕ 26-9-2024ರ ಗುರುವಾರದಂದು ಕ್ಲಬ್‌ನ ಸಂಪ್ರದಾಯದಂತೆ ನೂತನ ಸದಸ್ಯರಿಗಾಗಿ ಕ್ಲಬ್ಬಿನ ಹಿರಿಯ ಸದಸ್ಯರ ಸಮುಖದಲ್ಲಿ ಓರಿಯಂಟೇಷನ್ (ನೂತನ ಸದಸ್ಯರಿಗೆ ಕ್ಲಬ್ಬಿನ ಕಾರ್ಯವೈಖರಿಗಳ ಬಗ್ಗೆ ತಿಳಿಯಪಡಿಸುವ ಕಾರ್ಯಕ್ರಮ) ಸಭೆಯನ್ನು ನಡೆಸಲಾಯಿತು.

**Donate Blood and Save Lives**




ಶಿವಮೊಗ್ಗ ಮಿಡ್‌ಟೌನ್ ರೋಟರಿ ಚಾರಿಟಿ ಫೌಂಡೇಶನ್ ವತಿಯಿಂದ ದಿನಾಂಕ 6-10-2024ರ ಭಾನುವಾರದಂದು CME ಕಾರ್ಯಕ್ರಮ, ರಕ್ತದಿಂದ ಪ್ಲೆಟ್‌ಲೆಟ್ ಬೇರ್ಪಡಿಸುವ ನೂತನವಾದ ಮತ್ತು ಅತ್ಯಾಧುನಿಕವಾದ Apheresis (SDP)ಯಂತ್ರ ಹಾಗೂ ಶಿಘ್ರವಾಗಿ ಮತ್ತು ಗುಣಮಟ್ಟದ ರಕ್ತವನ್ನು ಪರೀಕ್ಷಿಸುವ CLIAಯಂತ್ರಗಳ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು



**Rt. ANIL P SHETTY was honnored for taking the responsibility for getting the best quote for the equipment, followup communications & delivery Medical equipment from ABBOTT ANIL P. SHETTY**

## ಪ್ರಕಟಣೆ

ದಿನಾಂಕ 20-10-2024ರ ಭಾನುವಾರದಂದು ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧಾಕಾರ್ಯಕ್ರಮಗಳನ್ನು ಶಿಕಾರಿಪುರದ ರೋಟರಿ ಕ್ಲಬ್ ಇವರ ಆತಿಥ್ಯದಲ್ಲಿ ಶಿಕಾರಿಪುರದಲ್ಲಿ ನಡೆಸಲಾಗುವುದು. ಇದರ ಪೂರ್ವ ಸಿದ್ಧತೆಗಳು ಈಗಾಗಲೇ ಪ್ರಾರಂಭವಾಗಿದ್ದು, ಆಸಕ್ತರು ಇದರಲ್ಲಿ ಪಾಲ್ಗೊಳ್ಳಬಹುದೆಂದು ಈ ಮೂಲಕ ಕೊರಲಾಗಿದೆ.




## ROTARIAN BIRTHDAY *Greetings to*

| | |
|---|---|
| Rtn. Shivashankar K.G. | Oct-01 |
| Rtn. Anand I.R. | Oct-09 |
| Rtn. Sagar | Oct-09 |



## MARRIAGE ANNIVERSARY *Greetings to*

| | |
|---|---|
| Rtn. Arshika Hegde | Oct-02 |
| Spous. | |
| Rtn. Sunitha Chethan | Oct-06 |
| Spous. Chethan | |
| Rtn. Narayanappa G.R. | Oct-10 |
| Ann. Latha R. | |

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764